# ಕರ್ನಾಟಕದಲ್ಲಿ ಶ್ರೀರಾಮಾನುಜರು

◆ ಸ್ವಾಮಿ ರಾಮಕೃಷ್ಣಾನಂದ

**ಕಾಂ**ಚೀಪುರದಿಂದ ಚೋಳರಾಜ್ಯವನ್ನು ಕ್ರೂರಿ ರಾಜ ಕ್ರಿಮಿ ಕಂಠನು ಆಳುತ್ತಿದ್ದ. ಅವನು ಮತಾಂಧ ಶೈವ. ತನ್ನ ರಾಜ್ಯದ ಎಲ್ಲರೂ ಶೈವಧರ್ಮವನ್ನೇ ಅನುಸರಿಸಬೇಕೆಂದು ನಿರ್ಧರಿಸಿ ವಾದಕ್ಕಾಗಿ ಶ್ರೀವೈಷ್ಣವ ಪಂಥದ ಮುಂದಾಳು ಶ್ರೀರಾಮಾನುಜರನ್ನು ಕರೆ ಕಳುಹಿಸಿದನು. ಶಿಷ್ಯ ಕೂರೇಶನು ರಾಜನ ದುರ್ಬುದ್ಧಿಯನ್ನು ಊಹಿಸಿ, ತಾನು ರಾಮಾನುಜರ ವಸ್ತ್ರ ಧರಿಸಿ ಆಸ್ಥಾನಕ್ಕೆ ಹೊರಟು, ಜನರ ಒಳಿತಿಗಾಗಿ ವೇಷ ಮರೆಸಿಕೊಂಡು ಜೀವ ಉಳಿಸಿಕೊಳ್ಳಲು ಗುರುವಿಗೆ ತಿಳಿಸಿದನು. ಶೈವ ಪಂಡಿತರು ವಾದದಲ್ಲಿ ಕೂರೇಶನನ್ನು ಗೆಲ್ಲಲಾಗಲಿಲ್ಲ. ಅವನನ್ನು ಕಾಡಿಗೆ ಒಯ್ದು ಕಣ್ಣು ಕಿತ್ತು ಶಿಕ್ಷಿಸಿರಿ ಎಂದು ರಾಜ ತನ್ನ ಭಟರಿಗೆ ಆಜ್ಞಾಪಿಸಿದನು. ನೋವನ್ನು ಸಹಿಸಿ, ತನ್ನ ಕಣ್ಣು ಕಿತ್ತ ಭಟರಿಗೆ ಒಳ್ಳೆಯದಾಗಲೆಂದು ಕೂರೇಶನು ದೇವರಲ್ಲಿ ಪ್ರಾರ್ಥಿಸಿದನು. ಅವರಲ್ಲಿ ಭಕ್ತಿ ಜಾಗೃತವಾಯಿತು. ಅವರು ಭಿಕ್ಷುಕನೊಬ್ಬನಿಗೆ ಸ್ವಲ್ಪ ಹಣವಿತ್ತು, ಈ ಸಾಧುವನ್ನು ಶ್ರೀರಂಗಕ್ಕೆ ಕರೆದೊಯ್ಯಲು ತಿಳಿಸಿದರು.

ಇತ್ತ ಶ್ರೀರಾಮಾನುಜರು ಎರಡು ಮೂರು ದಿನ ಆಹಾರವೂ ಇಲ್ಲದೆ ಕಾಡಿನಲ್ಲಿಯೇ ಪಶ್ಚಿಮಕ್ಕೆ ನಡೆದರು. ಶಿಷ್ಯರೊಡನೆ ಚೋಳ ರಾಜ್ಯದ ಗಡಿ ದಾಟಿ ಜೈನ ಬಿಟ್ಟಿದೇವನು ಆಳುತ್ತಿದ್ದ ಹೊಯ್ಸಳ ರಾಜ್ಯವನ್ನು ತಲುಪಿದರು. ಶ್ರೀವೈಷ್ಣವ ಧರ್ಮದ ತತ್ತ್ವಗಳನ್ನು ತಿಳಿಯುವ ಕುತೂಹಲದಿಂದ ಬಿಟ್ಟಿದೇವನು ತನ್ನ ಆಸ್ಥಾನಕ್ಕೆ ಆಚಾರ್ಯರನ್ನು ಆಹ್ವಾನಿಸಿದನು. ಯತಿರಾಜರು ಅಲ್ಲಿದ್ದ ಪಂಡಿತರನ್ನು ವಾದದಲ್ಲಿ ಸೋಲಿಸಲು ರಾಜನೇ ಮೊದಲಾಗಿ ಅನೇಕ ಸಹಸ್ರ ಜನರು ಶ್ರೀವೈಷ್ಣವ ಧರ್ಮವನ್ನು ಅನುಸರಿಸತೊಡಗಿದರು. ಬಿಟ್ಟಿದೇವನಿಗೆ ವಿಷ್ಣುವರ್ಧನನೆಂಬ ಹೊಸ ಹೆಸರು ಬಂದಿತು.

ಸ್ವಲ್ಪ ಸಮಯದ ನಂತರ ಶ್ರೀರಾಮಾನುಜರು ಯಾದವಾದ್ರಿಗೆ ಹೋದರು. ಅಲ್ಲಿ ೧೦೨೦ನೇ ಶಕವರ್ಷದ ಪುಷ್ಯಮಾಸ ಚತುರ್ದಶಿಯಂದು ತುಲಸೀವನದ ಮಧ್ಯೆ ಗೆದ್ದಲು ಹುತ್ತದಲ್ಲಿ ಒಂದು ವಿಗ್ರಹವಿರುವಂತೆ ರಾಮಾನುಜರಿಗೆ ತೋರಿತು. ಅವರು ಹುತ್ತವನ್ನು ಅಗೆಸಿ, ವಿಗ್ರಹವನ್ನು ಶುಚಿಗೊಳಿಸಿ ಪೀಠದಲ್ಲಿ ಸ್ಥಾಪಿಸಿದರು. ಸುತ್ತಲಿನ ಹಿರಿಯರು, "ಹಿಂದೆ ಮುಸ್ಲಿಮರು ದಾಳಿ ಮಾಡಿ ದೇವಸ್ಥಾನಗಳನ್ನು ನಾಶಪಡಿಸಿದರು. ಆ ಕಾಲದಲ್ಲಿ ಯಾದವಾದ್ರಿಪತಿ ವಿಷ್ಣುವನ್ನು ಎಲ್ಲೋ ಅವಿಸಿಟ್ಟಿದ್ದರೆಂದು ಕೇಳಿದ್ದೇವೆ" ಎಂದರು. "ನೀವೆನ್ನುವುದು ನಿಜ. ಇದೇ ಆ ಯಾದವಾದ್ರಿಪತಿ. ನಿನ್ನೆ ನನ್ನ ಕನಸಿನಲ್ಲಿ ಬಂದು ಪೂಜೆ ಸಲ್ಲಿಸಲು ಹೇಳಿದಂತೆ ಆಯಿತು. ನಾವೆಲ್ಲರೂ ಸೇರಿ, ಸ್ವಾಮಿಗೆ ಸೇವೆ ಸಲ್ಲಿಸಿ, ಒಂದು ಭವ್ಯ ದೇವಾಲಯವನ್ನು ನಿರ್ಮಿಸೋಣ" ಎಂದರು ರಾಮಾನುಜರು. ಅಲ್ಪ ಕಾಲದಲ್ಲೇ ದೇವಾಲಯದ ನಿರ್ಮಾಣವಾಯಿತು. ದೇವರ ಸೇವೆಗೆ ನೀರು ಒದಗಿಸುತ್ತಿದ್ದ ಕಲ್ಯಾಣಿಯ ಉತ್ತರದ ದಂಡೆಯಲ್ಲಿ ನಡೆದಾಡುತ್ತಿರುವಾಗ ರಾಮಾನುಜರಿಗೆ ಬಿಳಿಯ ಮಣ್ಣು ಗೋಚರಿಸಿತು. ಶ್ರೀವೈಷ್ಣವರ ತಿರುನಾಮಕ್ಕೆ ಅಗತ್ಯವಾಗಿ ಬೇಕಾಗಿದ್ದ ಬಿಳಿಯ ಮಣ್ಣನ್ನು ಬಹುದೂರದಿಂದ ತರಿಸಲಾಗುತ್ತಿತ್ತು. ಈಗ ಅಲ್ಲಿಯೂ ಸಿಕ್ಕುತ್ತಿರಲಿಲ್ಲ. ಈ ಮಣ್ಣು ಮೇಲುಕೋಟೆಯಲ್ಲಿಯೇ (ಯಾದವಾದ್ರಿಯ ಈಗಿನ ಹೆಸರು) ಸಿಕ್ಕಿದುದು ಆಚಾರ್ಯರಿಗೆ ತುಂಬ ಸಂತಸ ತಂದಿತು.

ದಕ್ಷಿಣದ ದೇವಾಲಯಗಳಲ್ಲಿ ದೇವರ ಎರಡು ವಿಗ್ರಹಗಳಿಗೆ ಪೂಜೆ ಸಲ್ಲುತ್ತದೆ; ಅಚಲವಾದ ಮೂಲ ಮೂರ್ತಿ ಹಾಗೂ ಸಚಲವಾದ, ಹಬ್ಬದ ದಿನಗಳಂದು ಉತ್ಸವಗಳಲ್ಲಿ ಹೊರಬರುವ ಉತ್ಸವ ಮೂರ್ತಿ. ಯಾದವಾದ್ರಿಪತಿಯು ಒಂದು ದಿನ ರಾಮಾನುಜರ ಕನಸಿನಲ್ಲಿ ಬಂದು "ವತ್ಸ! ನಿನ್ನ ಸೇವೆಯಿಂದ ನಾನು ಸಂತುಷ್ಟನಾಗಿದ್ದೇನೆ. ಆದರೆ ದೇವಾಲಯದಿಂದ ಹೊರ ಹೋಗಿ, ನನ್ನ ಭಕ್ತರನ್ನು ಅನುಗ್ರಹಿಸಿ, ಪತಿತರನ್ನು ಪಾಪಮುಕ್ತರನ್ನಾಗಿ ಮಾಡಲು ಆಗುತ್ತಿಲ್ಲವಲ್ಲ! ಹೀಗಾಗಿ ಈಗ ದಿಲ್ಲಿಯ ಸುಲ್ತಾನನ ಬಳಿ ಇರುವ ಸಂಪತ್ಕುಮಾರನೆಂಬ ಹೆಸರಿನ ನನ್ನ ಉತ್ಸವ ಮೂರ್ತಿಯನ್ನು ತರಿಸು" ಎಂದು ಹೇಳಿದಂತೆ ಆಯಿತು.

ಮರುದಿನ ಬೆಳಗಾದೊಡನೆ ಯತಿರಾಜರು ಕೆಲವು ಶಿಷ್ಯರೊಡಗೂಡಿ ಉತ್ತರ ಭಾರತಕ್ಕೆ ಹೊರಟರು. ಎರಡು ತಿಂಗಳ ಬಳಿಕ ದಿಲ್ಲಿ ತಲುಪಿ, ಸುಲ್ತಾನನನ್ನು ಭೇಟಿಯಾದರು. ಆಚಾರ್ಯರ ಪಾಂಡಿತ್ಯವನ್ನೂ ತೇಜಃಪೂರ್ಣ ವ್ಯಕ್ತಿತ್ವವನ್ನೂ ಕಂಡು ವಿಸ್ಮಿತನಾದ ದಿಲ್ಲಿಯ ಚಕ್ರವರ್ತಿಯು ಅವರಿಗೆ ಬೇಕಾದ ವಿಗ್ರಹವನ್ನು ಕೊಡಲು ಒಪ್ಪಿದನು. ದೇವಸ್ಥಾನಗಳಿಂದ ತಂದ ವಿಗ್ರಹಗಳನ್ನು ಇಟ್ಟಿದ್ದ ವಿಶಾಲವಾದ ಕೋಣೆಗೆ ರಾಮಾನುಜರನ್ನು ಕರೆದೊಯ್ಯಲಾಯಿತು. ಅಲ್ಲಿ ತಮಗೆ ಬೇಕಾದ ಮೂರ್ತಿಯನ್ನು ಕಾಣದೆ ನಿರಾಶರಾದಾಗ ಚಕ್ರವರ್ತಿಯು ತನ್ನ ಮಗಳು ಪ್ರೀತಿಯಿಂದ ಇಟ್ಟುಕೊಂಡಿದ್ದ ವಿಗ್ರಹವನ್ನು ತೋರಿಸಿದನು. ಅದೇ ಸಂಪತ್ಕುಮಾರನೆಂದು ರಾಮಾನುಜರು ಗುರುತು ಹಿಡಿದರು. ಚಕ್ರವರ್ತಿಯ ಅನುಮತಿ ಪಡೆದು ಮೂರ್ತಿಯನ್ನು ತೆಗೆದುಕೊಂಡು ಅವರು ದಕ್ಷಿಣಕ್ಕೆ ಪ್ರಯಾಣ ಬೆಳೆಸಿದರು.

ಅವರು ವಿಶ್ರಾಂತಿಯನ್ನೇ ಪಡೆಯದೆ ಹಗಲಿರುಳೂ ನಡೆದರು. ಏಕೆಂದರೆ, ತನ್ನ ಪ್ರೀತಿಯ ಮಗಳು ಆ ವಿಗ್ರಹ ಬೇಕೆಂದು ಹಟ ಮಾಡಿದರೆ, ಸುಲ್ತಾನನು ಅದನ್ನು ಹಿಂದಿರುಗಿ ಪಡೆಯುವನು ಎಂದು ಅವರಿಗೆ ಆತಂಕವಾಗಿತ್ತು.



ಭಗವಾನ್ ಶ್ರೀರಾಮಕೃಷ್ಣರ ನೇರಶಿಷ್ಯರಾಗಿದ್ದ ಸ್ವಾಮಿ ರಾಮಕೃಷ್ಣಾನಂದರು ರಚಿಸಿರುವ *Life of Sri Ramanuja* ಎಂಬ ಗ್ರಂಥದಿಂದ ಆಯ್ದು ಅನುವಾದಿಸಿದ ಭಾಗ. ಅನುವಾದಕರು ಡಾ. ಎಚ್. ಪಾಂಡುರಂಗ ವಿಠಲ, ಮೈಸೂರು.

ತನ್ನ ಪರಮ ಪ್ರೀತಿಯ ವಸ್ತುವನ್ನು ಕೆಲವು ಬ್ರಾಹ್ಮಣರು ತೆಗೆದುಕೊಂಡು ಹೋದರೆಂದು ರಾಜಕುಮಾರಿಗೆ ತಿಳಿಯಿತು. ಅವಳ ದುಃಖವನ್ನು ಯಾವುದರಿಂದಲೂ, ಯಾರಿಂದಲೂ-ತಂದೆಯಿಂದಲೂ ಕಡಿಮೆ ಮಾಡಲಾಗಲಿಲ್ಲ. ದಿನದಿಂದ ದಿನಕ್ಕೆ ವಿರಹದಿಂದ ಕೃಶಳಾದ ಅವಳ ಸ್ಥಿತಿಯನ್ನು ನೋಡಿ ಭೀತಿಗೊಂಡ ಸುಲ್ತಾನನು ಆ ಬ್ರಾಹ್ಮಣರಿಂದ ಬಲವಂತದಿಂದಾದರೂ ಸರಿಯೇ ಮೂರ್ತಿಯನ್ನು ವಾಪಸು ಪಡೆದು ತನ್ನಿರೆಂದು ಭಟರನ್ನು ಅಟ್ಟಿದ. ಆ ಭಟರ ಜತೆ ತನಗೂ ಹೋಗಲು ಅನುಮತಿ ನೀಡಬೇಕೆಂದು ರಾಜಕುಮಾರಿಯು ಪ್ರಾರ್ಥಿಸಿದಳು. ಹೀಗಾಗಿ ದೊಡ್ಡ ಸೈನ್ಯ, ಭಟರು, ದಾಸಿಯರ ಮಧ್ಯೆ ಸುಂದರವಾದ ಪಲ್ಲಕ್ಕಿಯಲ್ಲಿ ಕುಳಿತು ಬೀಬಿ ನಾಚ್ಚಿಯಾರ್ ದಕ್ಷಿಣದತ್ತ ಹೊರಟಳು. ಅವಳನ್ನು ಅತಿಯಾಗಿ ಪ್ರೀತಿಸುತ್ತಿದ್ದ ರಾಜಕುಮಾರ ಕುಬೇರನೂ ಏನಾದರೂ ಸಹಾಯಮಾಡಿ ಅವಳನ್ನು ಮದುವೆಗೆ ಒಲಿಸಿಕೊಳ್ಳೋಣ ಎಂದು ಆಶಿಸುತ್ತ ಅವಳ ಜತೆಗೇ ಹೊರಟನು.

ಅಷ್ಟರಲ್ಲಿ ರಾಮಾನುಜರು ಸುಲ್ತಾನನ ರಾಜ್ಯದ ಎಲ್ಲೆಯನ್ನು ದಾಟಿದ್ದರು. ಮೇಲುಕೋಟೆ ತಲುಪಿ ದೇವಾಲಯದ ಒಂದು ಗುಪ್ತ ಸ್ಥಳದಲ್ಲಿ ಸಂಪತ್ಕುಮಾರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದರು. ಅದನ್ನು ಹೊತ್ತು ತರುವಲ್ಲಿ ಪ್ರಯಾಣದುದ್ದಕ್ಕೂ ಅಂತ್ಯಜರು ಸಹಾಯ ಮಾಡಿದ್ದರಿಂದಲೇ ಇದು ಸಾಧ್ಯವಾಯಿತು. ಕೃತಜ್ಞತೆಯ ಕುರುಹಾಗಿ, ಈಗಲೂ ಅಂತ್ಯಜರಿಗೆ ದೇವಾಲಯದೊಳಗೆ ಪ್ರವೇಶದ ಹಕ್ಕಿದೆ.

ಅದ್ವೈತದ ನಿರಾಕಾರ ಸ್ಥಿತಿಯಂತೆಯೇ ದೇವರ ಸಾಕಾರ ರೂಪಗಳೂ ಸತ್ಯ. ಸೃಷ್ಟಿಚಕ್ರದ ಒಂದು ಉರುಳಿನವರೆಗೆ ದೇವರು ಮೂರ್ತಿರೂಪದಲ್ಲಿ ಕಾಣಿಸಿಕೊಂಡು ಭಕ್ತರ ಇಷ್ಟಾರ್ಥಗಳನ್ನು ಪೂರೈಸುವನು. ಇಂತಹ ಮೂರ್ತಿಗಳನ್ನು ಅರ್ಚಾವತಾರ ಎನ್ನುವರು. ಅಮರನಾಥ, ಕೇದಾರನಾಥ, ಬದರಿನಾರಾಯಣ ಮೊದಲಾದ ಅತಿ ಪ್ರಾಚೀನ ಮೂರ್ತಿಗಳಂತೆಯೇ ಯಾದವಾದ್ರಿನಾಥನೂ ಅರ್ಚಾವತಾರ ಎನ್ನುತ್ತಾರೆ. ಯಾದವಾದ್ರಿಪತಿಯ ಸಚಲ ವಿಗ್ರಹ ಸಂಪತ್ಕುಮಾರ ಮೂರ್ತಿಯು ಬೇರೆ ಉತ್ಸವ ಮೂರ್ತಿಗಳಂತೆಯೇ ಹೊರನೋಟಕ್ಕೆ ತೋರಬಹುದು. ಆದರೆ ಯತಿರಾಜರ ಸೂಕ್ಷ್ಮದೃಷ್ಟಿಗೆ ವಿಷ್ಣುವೇ ಈ ಪ್ರತಿಮೆಯಾಗಿ ಅವತರಿಸಿ, ತನ್ನ ಆಪ್ತ ಭಕ್ತೆಯಾದ ಬೀಬಿ ನಾಚ್ಚಿಯಾರ್‌ಳನ್ನು ಅನುಗ್ರಹಿಸಲೆಂದೇ ದಿಲ್ಲಿ ಸುಲ್ತಾನನ ಕೈವಶವಾಗಿದ್ದುದು ಗೊತ್ತಾಯಿತು. ಹಿಂದಿನ ಅನೇಕ ಜನ್ಮಗಳ ಸಂಸ್ಕಾರದಿಂದಾಗಿಯೇ ಆಕೆ ಸಂಪತ್ಕುಮಾರನನ್ನು ತನ್ನ ಪ್ರೀತಿಯ ದೈವವನ್ನಾಗಿ ಆರಾಧಿಸಿ, ಆನಂದಸಾಗರದಲ್ಲಿ ಮುಳುಗಿದ್ದಳು.

ಇಷ್ಟದೈವವನ್ನು ಹುಡುಕುತ್ತ ವಿರಹದ ದುಃಖವನ್ನು ತಾಳಲಾರದೆ ತೊಳಲಿ ಆಕೆಯು ತನ್ನ ಜೀವವನ್ನೇ ಬಲಿಕೊಡಲು ಸಿದ್ಧಳಾದುದರಲ್ಲಿ ಆಶ್ಚರ್ಯವಿಲ್ಲ. ದೊಡ್ಡ ಸೈನ್ಯ ತನ್ನನ್ನು ಹಿಂಬಾಲಿಸುತ್ತಿರಲು ರಾಜಕುಮಾರಿಯು ತನ್ನ ಇಷ್ಟದೈವವನ್ನು ಅರಸುತ್ತ ದಕ್ಷಿಣಕ್ಕೆ ಬಂದಳು. ದಕ್ಷಿಣ ರಾಜ್ಯದ ಗಡಿಗೆ ಬಂದರೂ ತನ್ನ ಪ್ರಿಯಮೂರ್ತಿ ಸಿಕ್ಕದಿರಲು, ಆಕೆ ಹತಾಶಳಾಗಿ ಪ್ರಾಣತ್ಯಾಗ ಮಾಡಲು ನಿರ್ಧರಿಸಿದಳು. ವಿರಹವೇದನೆ ಅವಳ ಹೃದಯವನ್ನು ಹಿಂಡಿ. ಕಣ್ಣೀರು ಧಾರೆಯಾಗಿ ಉಕ್ಕಿತು. ಕುಬೇರನ ಭರವಸೆಯ ಮಾತುಗಳು ಅವಳ ಕಿವಿಯನ್ನು ಸೋಕಲಿಲ್ಲ. 'ನನ್ನ ದೇವರೆ, ನನ್ನ ದೇವರೆ' ಎಂದಷ್ಟೇ ಆಕೆ ಹಲುಬುತ್ತಿದ್ದು ತನ್ನ ಅಂತರಂಗದ ದುಃಖವನ್ನು ವ್ಯಕ್ತಪಡಿಸುತ್ತಿದ್ದಳು. ಒಂದು ರಾತ್ರಿ ಸೈನ್ಯಕ್ಕೆ ತಿಳಿಯದಂತೆ, ತನ್ನ ಇಷ್ಟದೈವವನ್ನು ಧ್ಯಾನಿಸುತ್ತ, ದಟ್ಟಕಾಡಿನಲ್ಲಿ ದಕ್ಷಿಣಾಭಿಮುಖವಾಗಿ ಹೊರಟುಬಿಟ್ಟಳು. ಕುಬೇರ ಕೆಲವು ಬಾರಿ ತಂದುಕೊಡುತ್ತಿದ್ದ ಕಾಡು ಹಣ್ಣುಹಂಪಲುಗಳಲ್ಲಿ ಸ್ವಲ್ಪವನ್ನು ಸ್ವೀಕರಿಸಿ ಹಸಿವು ಬಾಯಾರಿಕೆ ನೀಗಿಸಿಕೊಳ್ಳುತ್ತಿದ್ದಳು. ರಾತ್ರಿಯಾದಾಗ, ದಾರಿಕಾಣದೆ ಇದ್ದುದರಿಂದ ವಿಶ್ರಾಂತಿ ತೆಗೆದುಕೊಳ್ಳಲೇಬೇಕಾಗಿತ್ತು. ಹೀಗೆ ಅನೇಕ ದಿನ ಪ್ರಯಾಣ ಮಾಡಿ ಆಕೆ ಮೇಲುಕೋಟೆಗೆ ಬಂದಳು. ಸೂರ್ಯನನ್ನು ನೋಡಲು ಯಾರ ಸಹಾಯವೂ ಹೇಗೆ ಬೇಡವೋ ಹಾಗೆ ಶ್ರೀಹರಿಯ ಮೇಲಿನ ದೃಢ ಭಕ್ತಿಯಿಂದಾಗಿ ಜ್ಞಾನಚಕ್ಷು ಮೂಡಿರಲು ರಾಜಕುಮಾರಿಗೆ ತನ್ನ ಜೀವದ ಜೀವವಾದ ಸಂಪತ್ಕುಮಾರನನ್ನು ಸೇರಲು ಯಾರ ಸಹಾಯವೂ ಬೇಕಾಗಲಿಲ್ಲ. ಹೀಗೆ ಬಹುಕಾಲದ ತೀವ್ರ ಆಕಾಂಕ್ಷೆಯಿಂದಾಗಿ ದಿವ್ಯಮಿಲನ ಸಾಧ್ಯವಾಯಿತು. ನದಿ ಸಮುದ್ರವನ್ನು ಸೇರಿತು. ಹಸಿದವನಿಗೆ ಅಮೃತಕುಂಭ ಸಿಕ್ಕಂತೆ ಆಕೆ ಸಂತೃಪ್ತಳಾದಳು. ಯತಿರಾಜರು ಹಾಗೂ ಅವರ ಶಿಷ್ಯರು ಆಕೆಯ ಈ ಗಾಢವಾದ ಭಕ್ತಿಯನ್ನು ನೋಡಿ ಅಚ್ಚರಿಗೊಂಡರು. ಮುಸ್ಲಿಮಳಾಗಿದ್ದರೂ ಆಕೆ ದೇವಾಲಯವನ್ನು ಪ್ರವೇಶಿಸಿದಾಗ ಯಾರೂ ತಡೆಯೊಡ್ಡಲಿಲ್ಲ. ನೈಜ ಭಕ್ತರಿಗೆ ಜಾತಿಯಿಲ್ಲ. ಅವಳ ಆಸೆಗಳೆಲ್ಲ ಪೂರ್ಣವಾದುವು. ಇಷ್ಟದೈವ ಸಾನ್ನಿಧ್ಯದಲ್ಲಿ ಆಕೆಯ ದಿನಗಳು ಆನಂದದಿಂದ ಕಳೆದುವು. ಕೊನೆಗೆ ಆಕೆ ಸಂಪತ್ಕುಮಾರನಲ್ಲಿ ಐಕ್ಯಳಾದಳು.

ಕುಬೇರನಿಗೆ ಬೀಬಿ ನಾಚ್ಚಿಯಾರಳು ಆರಾಧ್ಯದೈವ. ಯಾವಾಗ ಅವಳ ದೇಹ ಸಂಪತ್ಕುಮಾರನಲ್ಲಿ ಐಕ್ಯವಾಯಿತೊ ಆತ ತನ್ನ ಮುಸ್ಲಿಂ ಸಂಪ್ರದಾಯಗಳನ್ನು ತ್ಯಜಿಸಿ ಶ್ರೀರಂಗದ ರಂಗನಾಥ ಸ್ವಾಮಿಯನ್ನು ಆಶ್ರಯಿಸಿದ. ಅನಂತರ ಈ ಮುಸ್ಲಿಂ ಭಕ್ತನು ಶ್ರೀಪುರಿಗೆ ಹೋಗಿ ಪುರುಷೋತ್ತಮನನ್ನು ಸಾಕ್ಷಾತ್ಕರಿಸಿಕೊಂಡನು.

ದೇಹಪ್ರಜ್ಞೆಯನ್ನು ಕಳೆದುಕೊಂಡವರಿಗೆ ಜಾತಿಯ ಹೆಮ್ಮೆಯಿಂದ ಪೂರ್ಣ ಬಿಡುಗಡೆ ಸಾಧ್ಯ. ಏಕೆಂದರೆ ಬ್ರಾಹ್ಮಣ, ಕ್ಷತ್ರಿಯ, ಮುಸಲ್ಮಾನ, ಕ್ರೈಸ್ತ ಇತ್ಯಾದಿ ಪದಗಳನ್ನು ದೇಹಕ್ಕೆ ಸೀಮಿತಗೊಳಿಸಿ ಉಪಯೋಗಿಸುವರು. ದೇವರ ಕೃಪೆಯಿಂದ ಬೀಬಿ ನಾಚ್ಚಿಯಾರ್ ಮತ್ತು ಕುಬೇರರು ದೇಹಾತ್ಮಬುದ್ಧಿಯನ್ನು ತ್ಯಜಿಸಿದ್ದರಿಂದ ಜಾತಿಯ ಸಂಕೋಲೆಗೆ ಒಳಗಾಗಿರಲಿಲ್ಲ. ಹೀಗಾಗಿ ಶ್ರೀರಾಮಾನುಜರು ಅವರಿಗೆ ಶ್ರೇಷ್ಠಭಕ್ತರೆಂದು ಮನ್ನಣೆ ನೀಡಿದರು. ದಕ್ಷಿಣದ ಅನೇಕ ವೈಷ್ಣವ ದೇವಸ್ಥಾನಗಳಲ್ಲಿ ದಿಲ್ಲಿ ಸುಲ್ತಾನನ ಮಗಳ ದಿವ್ಯಮೂರ್ತಿಗಳು ಈಗಲೂ ಪೂಜೆಗೊಳ್ಳುತ್ತಿವೆ. ಹಿಂದೂ ಧರ್ಮದ ವಿಶ್ವಾತ್ಮಕತೆಯ ದ್ಯೋತಕ ಇದು.

ಶ್ರೀರಾಮಾನುಜರು ಮೇಲುಕೋಟೆಯಿಂದ ಹೊರಟು ವೃಷಭಾಚಲ, ಶ್ರೀವಿಲ್ಲಿಪುತ್ತೂರು ಮೊದಲಾದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಕೊನೆಗೆ ಶ್ರೀರಂಗಂನಲ್ಲಿನ ತಮ್ಮ ಮೂಲ ಮಠಕ್ಕೆ ಹಿಂದಿರುಗಿ ಅಲ್ಲಿಯೇ ನೆಲೆ ನಿಂತರು. ✡